## ಶ್ರೀಚಕ್ರ ಶಂಖ

ಹಾಸನದ ಕೃಷ್ಣ ಪದವಿ ಪೂರ್ವ ಕಾಲೇಜಿನಲ್ಲಿ ಇತಿಹಾಸದ ಉಪನ್ಯಾಸಕಿಯಾಗಿರುವ ನನಗೆ ಐತಿಹಾಸಿಕ ಸ್ಥಳಗಳಿಗೆ ಹೋಗುವುದೆಂದರೆ ಅಪರಿಮಿತ ಆಸಕ್ತಿ. 20 ವರ್ಷಗಳ ಹಿಂದೆ ಹಂಪಿಗೆ ನಮ್ಮ ಕಾಲೇಜಿನ ವಿದ್ಯಾರ್ಥಿಗಳನ್ನು ಪ್ರವಾಸಕ್ಕೆ ಕರೆದುಕೊಂಡು ಹೋಗಿ ವಿಜಯನಗರ ಸಾಮ್ರಾಜ್ಯದ ಕಲಾ ಕೊಡುಗೆಯಾದ ವಿರೂಪಾಕ್ಷ ದೇವಾಲಯದ ದರ್ಶನ ಮಾಡಿಸಿದೆ. ನಂತರ ದೇವಾಲಯದ ಮುಂದಿರುವ ಬೀದಿಯ ಅಂಗಡಿ ಮಳಿಗೆಗಳಿಗೆ ನಾವೆಲ್ಲರೂ ಪ್ರವಾಸದ ನೆನಪಿಗಾಗಿ ಏನಾದರೂ ವಿಶೇಷವಾದ ವಸ್ತುವನ್ನು ಕೊಳ್ಳಲು ಬಂದೆವು. ಆಗ ಒಂದು ಅಂಗಡಿ ಮಳಿಗೆಯಲ್ಲಿ ಕಂಡದ್ದೇ ಸುಂದರವಾದ ಅದ್ಭುತ ವಿನ್ಯಾಸದಿಂದ ಕಂಗೊಳಿಸುವ ಈ ಶಂಖ. ಈ ಚಕ್ರರೂಪಿ ಶಂಖ ವಿಷ್ಣುವಿನ ಕರ ಕಮಲಗಳ ಪ್ರತೀಕದಂತೆ ಕಾಣುತ್ತದೆ. ಬೆಲೆ ಕಟ್ಟಲಾಗದ ಈ ಸುಂದರ ಶಂಖದ ಬೆಲೆ ಅಂದು 50 ರೂಪಾಯಿ. ವಿಜಯನಗರದ ವೈಭವದಷ್ಟೇ ವೈಭವವಾಗಿರುವ ಈ ಶಂಖ ಇಂದು ನನ್ನ ಮನೆಯನ್ನು ಅಲಂಕರಿಸಿ ನೋಡುಗರ ಮನವನ್ನು ಸೂರೆಗೊಳ್ಳುತ್ತಿದೆ.

■ ಎ.ವಿಜಯಲಕ್ಷ್ಮಿ ಭಟ್, ಹಾಸನ





## ಸಾಂಬಾರ್ ಸೌತೆಗಳ ಸಾಲು

ಮಲೆನಾಡು ಹಾಗೂ ಕರಾವಳಿ ಪ್ರದೇಶಗಳಲ್ಲಿ ಮಳೆಗಾಲಕ್ಕೆಂದು ಕೆ.ಜಿ.ಗಟ್ಟಲೆ ಸಾಂಬಾರ್ ಸೌತೆಕಾಯಿಗಳನ್ನು ಖರೀದಿಸಿ ಸಂಗ್ರಹಿಸಿಡಲಾಗುತ್ತದೆ. ಅವುಗಳನ್ನು ಬಾಳೆಯ ನಾರಿನಿಂದ ಬಿಗಿದು ಕಟ್ಟಿ ಮೇಲ್ಚಾವಣಿಗೆ ಇಳಿಬಿಡುವ ವಿಧಾನವನ್ನು ಇಲ್ಲಿ ಜನರು ಅನುಸರಿಸುತ್ತಾರೆ. ಬೇಕೆಂದಾಗ ಬಿಚ್ಚಿ ಅಡುಗೆಗೆ ಬಳಸಿಕೊಳ್ಳುತ್ತಾರೆ. ಮಳೆಗಾಲದಲ್ಲಿ ದೇಹವನ್ನು ತಂಪಾಗಿಡಲು ಇಲ್ಲಿನ ಜನರು ಸಾಂಬಾರ್ ಸೌತೆಯನ್ನು ಹೆಚ್ಚಾಗಿ ಸೇವಿಸುತ್ತಾರೆ. ನಾಟಿ ಈರುಳ್ಳಿ ಹಾಗೂ ನಾಟಿ ಬೆಳ್ಳುಳ್ಳಿಯನ್ನೂ ಇದೆ ರೀತಿ ನಾಡಿನ ಹಲವೆಡೆ ಕಟ್ಟಲಾಗುತ್ತದೆ.

■ ಗೀತಾ ಬರ್ಲ, ಅಮ್ಮೆ

## ಅರಿಶಿಣಕೊಂಬಲ್ಲಿ ಬಾತುಕೋಳಿ!

ವಿಭಿನ್ನ ದೃಷ್ಟಿಕೋನದಿಂದ ಕಾಣುವ ಹಾಗೂ ಹುಡುಕುವ ಪ್ರತಿಯೊಂದು ಕಣ್ಣುಗಳಿಗೂ ಪ್ರಕೃತಿಯ ಒಂದೊಂದು ವಸ್ತುವೂ ಒಂದೊಂದು ಕಲಾಕೃತಿಯಾಗಿಯೋ, ಪ್ರಾಣಿ–ಪಕ್ಷಿಗಳ ಪ್ರತಿಕೃತಿಯಾಗಿ ಕಾಣಿಸುತ್ತವೆ. ಅದಕ್ಕೆ ಅರಿಶಿಣದ ಕೊಂಬುಗಳೂ ಹೊರತಾಗಿಲ್ಲ. ಸಂತೆಯಲ್ಲಿ ಅರಿಶಿಣ ಬೇರುಗಳ ಚೀಲಕ್ಕೆ ಕೈ ಹಾಕಿದಾಗ ಕೈಗೆ ಬಂದ ಈ ಅರಿಶಿಣ ಕೊಂಬು ಥಟ್ಟನೆ ನೋಡಿದರೆ ಬಾತುಕೋಳಿಯಂತೆ, ಇನ್ನೊಂದು ಕೋನದಿಂದ ನೋಡಿದರೆ ಬಸವನಹುಳುವಿನಂತೆ ಕಂಡಿತು. ಇಂತಹ ಸಾಕಷ್ಟು ಬೇರು, ಗಡ್ಡೆಗಳು ನಮ್ಮ ಸುತ್ತಮುತ್ತಲು ಇರುತ್ತವಾದರೂ ಕೆಲವು ಮಾತ್ರ ಹೀಗೆ ಚಿತ್ರವಾಗಿ ನೆನಪಿನಲ್ಲಿ ಉಳಿಯುತ್ತವೆ.

■ ಸುರೇಶ ವಗ್ಗಾ,
ಗುಳೇದಗುಡ್ಡ

